**ವ್ಯಾಖ್ಯಾನ**

# <u>ಆರು ಬದುಕಿದರಯ್ಯ ಹರಿ ನಿನ್ನ ನಂಬಿ</u>

**Ref.**: Dasara Maatina Sobagu, by Dr. Vijayendra R Desai, page No. 159.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

ದಾಸ ವರೇಣ್ಯರ ಮಾತು –

'**ನಂಬಿ ಕೆಟ್ಟವರಿಲ್ಲವೋ ರಂಗಯ್ಯನ**' ನಂಬದೇ ಕೆಟ್ಟರ ಬಹುದು ಎನ್ನುತ್ತಾರೆ. ವಿಭೀಷಣ, ದ್ರೌಪದಿ ಮೊದಲಾದ ಸಾಕ್ಷಿ ಹೇಳುತ್ತಾರೆ, ಸರಿ, ಇನ್ನೊಂದೆಡೆ ನೋಡಿ --

ಆರು ಬದುಕಿದರಯ್ಯ ಹರಿ ನಿನ್ನ ನಂಬಿ || ಪ ||
ತೋರು ಈ ಜಗದೊಳಗೆ ಒಬ್ಬರನು ಕಾಣೆ || ಅಪ ||

ಕಲಹ ಬಾರದ ಹಾಗೆ ಕರ್ಣನನು ನೀ ಕೊಂದೆ
ಸುಲಭದಲಿ ಕೌರವರ ಮನೆಯ ಮುರಿದೆ
ನೆಲನ ಬೇಡುಲು ಪೋಗಿ ಬಲಿಯ ತಲೆಯನು ತುಳಿದೆ
ಮೊಲೆಯನುಣಿಸಲು ಬಂದ ಪೂತನಿಯ ಕೊಂದೆ || ೧ ||

ಕರಪತ್ರದಿಂದ ತಾಮ್ರಧ್ವಜನ ತಂದೆಯ
ಕೊರಳ ಕೊಯಿಸಿದೆ ನೀನು ಕುಂದಿಲ್ಲದೆ
ಮರುಳನಂದದಿ ಪೋಗಿ ಭೃಗು ಮುನಿಯ ಕಣ್ಣೊಡೆದೆ
ಅರಿತು ನರಕಾಸುರನ ಹೆಂಡಿರನು ಬೆರೆದೆ || ೨ ||

ತಿರಿದುಂಬ ದಾಸರ ಕೈಲಿ ಕಪ್ಪವ ಕೊಂಬೆ
ಗರುಡವಾಹನ ನಿನ್ನ ಚರಿಯನರಿಯೆ
ದೊರೆ ಪುರಂದರ ವಿಠಲ ನಿನ್ನನ್ನು ನಂಬಿದರೆ
ತಿರುಪೆಯೂ ಹುಟ್ಟಲೊಲ್ಲದು ಕೇಳೊ ಹರಿಯೇ || ೩ ||

ಹೀಗೆ ಇನ್ನೂ ಕೆಲ ನುಡಿಗಳು.
ನಂಬಿ ಬದುಕಲಿಲ್ಲ ಎನ್ನುವವರ ಪಟ್ಟಿ ಬೆಳೆಯುತ್ತದೆ. ಇದೂ ದಾಸವರೇಣ್ಯರ ಮಾತೇ.
ಏನಿದು ವಿಪರ್ಯಾಸ? ಹೇಗೆ ಹೊಂದಿಸುವದು?

'ನಂಬಿ ಕಟ್ಟವರಿಲ್ಲ ರಂಗಯ್ಯನ'
'ಯಾರು ಬದುಕಿದರಯ್ಯಾ ಹರಿ ನಿನ್ನ ನಂಬಿ'

ಸ್ವಾಮಿ, ನಿನ್ನನ್ನು ನಂಬಿದರು, ಉದ್ಧರಿತರಾದರು. ನಿನ್ನನ್ನು ನಂಬಿದರು, ನಾಶ ಹೊಂದಿದರು. ಇಬ್ಬರೂ ನಂಬಿದವರೇ. ಫಲ ಬೇರೆ ಬೇರೆ. ನಂಬಿಕೆಯಂತೆ ಸಾಧನೆ. ಸಾಧನೆಯಂತೆ ಫಲ. ನಂಬಿಕೆಯಲ್ಲಿ ಎರಡು ವಿಧ.

1) **ಹಿಂಗೇ ನಂಬುವವರು**

ಯಥಾರ್ಥವಾಗಿ ನಂಬುವದು. ಅನಾರೋಪಿತವಾಗಿ ನಂಬುವದು. ಇದ್ದದ್ದನ್ನು ಇದ್ದಂತೆ ನಂಬುವದು. ಪರಮಾತ್ಮನನ್ನು ಪರಮಾತ್ಮನೆಂದೇ ನಂಬುವದು. ಸರ್ವ - ಶ್ರೇಷ್ಠ, ಶಕ್ತ, ಸ್ವತಂತ್ರ, ಪ್ರದಾಯಕನೆಂದು ನಂಬುವದು.

**ಸಾ ಕಾಷ್ಠಾ ಸಾ ಪರಾಗತಿ|**

ನಂಬಿಕೆ ಎಂತಿರ ಬೇಕು? ಶ್ರದ್ಧೆ ತುಂಬಿರಬೇಕು. ಭಕ್ತಿ ಉಕ್ಕಬೇಕು.
**ರಕ್ಷತಿ ಇತ್ತೇವ ವಿಶ್ವಾಸಃ, ತದೀಯೋಹಂ, ಶರಣಾಗತಿರೇಷಾ.**
ನನ್ನನ್ನು ನಾನು ಅವನಿಗೇ ಸಮರ್ಪಿತ ನನ್ನನ್ನು ರಕ್ಷಿಸಿಯೇ ರಕ್ಷಿಸುತ್ತಾನೆ. ನಾನು ಅವನವನು. ಅವನು ನನ್ನ ಸ್ವಾಮಿ. ಜಗದ ಸ್ವಾಮಿ. ಈ ಅನುಸಂಧಾನ ಬೇಕು.

ಇದು ಸದ್ ನಂಬಿಕೆ. ಸದುಪಾಸನೆ. ಸತ್ ಸಾಧನೆ. ಪರಿಣಾಮ ಸತ್ ಫಲ. ಹೀಗೆ ನಂಬಿದವರು ಉದ್ಧರಿತರು.
ಪ್ರಲ್ಹಾದ, ವಿಭೀಷಣ, ದ್ರೌಪದಿ - ಪಟ್ಟಿ ಅನಂತ.
ಇದು 'ನಂಬಿ ಕೆಟ್ಟವರಿಲ್ಲ ರಂಗಯ್ಯನ'

**2) ಹಂಗs ನಂಬುವವರು.**

ಇವರೂ ನಂಬುವವರೇ. ತಪ್ಪಾಗಿ! ಮೇಲ್ಪದರ ನಂಬಿಕೆ. ಆರೋಪಿತ ನಂಬಿಕೆ. ಅಯಥಾರ್ಥ ತಿಳುವಳಿಕೆ.
ರಾಮ, ಕೃಷ್ಣರೂ ನಮ್ಮಂತೇ. ದೇವರಲ್ಲ. ಮನುಷ್ಯರೇ. ಚಾಣಾಕ್ಷರು. ಅದಕ್ಕಾಗಿ ಯಶಸ್ವಿಗಳು. ಹೆಚ್ಚಿನದೇನೂ ಇಲ್ಲ. ಇಂಥ ದಾರಿ ತಪ್ಪಿದ ನಂಬಿಕೆಗಳು ಇದ್ದದ್ದು ಇಲ್ಲ. ಇಲ್ಲದ್ದು ಇದೆ. ಮಹತ್ತಿನಲ್ಲಿ ಅಲ್ಪತ್ವ. ಅಲ್ಪದಲ್ಲಿ ಮಹತಿ. ತಪ್ಪು ತಿಳುವಳಿಕೆ. ತಪ್ಪಿದ ನಂಬಿಕೆ.
ಸಕಾಮ ಸಾಧನೆ. ತಕ್ಕ ವ್ಯರ್ಥ ಫಲ, ವಿಶ್ವಾಸದಂತೆ ಫಲ. ಹರಿಯ ಕಾನೂನು. ಸದುಪಾಸನೆಗೆ ಇತ್ತಪನು ತನ್ನ.
ತನ್ನ ಮರೆಯುತ್ತಾರೆ. ಧರ್ಮಾರ್ಥಗಳ ಕಾಮಿಸುತ್ತಾರೆ. ಅವರಿಗೆ ನಗುತ ಅತಿ ಶೀಘ್ರದಲಿ ಸುರಪತನಯ ಸುಯೋಧನರಿಗೆ ಇತ್ತಂತೆ ಕೊಡುತಿಪ್ಪ.

ಕೃಷ್ಣ ಪರಮಾತ್ಮ. ಸರ್ವೋತ್ತಮ. ಆತನೇ ಬೇಕು. ಇದು ಅರ್ಜುನನ ನಂಬಿಕೆ. ಕೃಷ್ಣನೇ ಬೇಕೆಂದ. ಬೇಡಿದ. ಪಡೆದ. ಉದ್ಧರಿತನಾದ.

ಒಬ್ಬ ಬಡಪಾಯಿ ಕೃಷ್ಣ ಏನು ಮಾಡಿಯಾನು? ಅಯಥಾರ್ಥ ನಂಬಿಕೆ. ಅವನ ಅಪಾರ ಸೈನ್ಯವೇ ಇರಲಿ. ಬೇಡಿದ. ಪಡೆದ. ನಾಶ ಹೊಂದಿದ. ದುರ್ಯೋಧನ.

ಕರ್ಣನನು ಕೊಂದೆ. ನಿನ್ನ ನಂಬಿದ್ದ. ಏನೆಂದು?
'ನೀನು ಕುಂತಿಯ ಜೇಷ್ಠ ಪುತ್ರ. ಪಾಂಡವ ಪಕ್ಷಕ್ಕೇ ಬಾ. ಅದು ಧರ್ಮದ ಪಕ್ಷ'. ಕರ್ಣನಿಗೆ ಕೃಷ್ಣನ ಆಮಂತ್ರಣ.
'ದುರ್ಯೋಧನ ನನ್ನ ಮಿತ್ರ. ಉಪಕಾರ ಉಂಡಿದ್ದೇನೆ. ಬರಲಾರೆ. ಮಿತ್ರ ದ್ರೋಹ. ಅಧರ್ಮವದು ಕೃಷ್ಣಾ'. ಧರ್ಮಾಧ್ಯಕ್ಷ, ಲೋಕಾಧ್ಯಕ್ಷನಿಗೆ ಕರ್ಣನ ಮಾತು. ಕೃಷ್ಣ ಹೇಳಿದ್ದೇ ಧರ್ಮ ಎಂಬ ಯಥಾರ್ಥ ತಿಳಿಯಲಿಲ್ಲ. ಅಯಥಾರ್ಥ ನಂಬಿದ. ನಾಶವಾದ ಕರ್ಣ.

ಬಲಿಚಕ್ರವರ್ತಿ. ಜಗ ತನ್ನದೆಂದು ನಂಬಿದ. ಜಗದ ಒಡೆಯ ವಾಮನ ಎಂಬುದು ಮರೆತ. ತನ್ನದಲ್ಲ. ಎಲ್ಲ ಅವನದು. ಎಲ್ಲ ತನ್ನದೆಂದ. ಅವನಿಗೇ ದಾನ ಮಾಡಿದ. ತ್ರಿವಿಕ್ರಮ ಎಲ್ಲ ಅಳೆದ. ಎಲ್ಲ ತನ್ನ ಕಾಲ ಕೆಳಗೆ. ಬಲಿಯ ತಲೆಯ ಮೇಲೇ ಪಾದ. ನೀನೂ ನನ್ನ ಅಧೀನ ಎಂದ. ಯಥಾರ್ಥ ತೋರಿದ. ಇದು ತಪ್ಪು ತಿಳುವಳಿಕೆಗೆ ತಕ್ಕ ಶಿಕ್ಷೆ. ಸಾತ್ವಿಕ ಸ್ವಭಾವಕ್ಕೆ ಮುಂದೆ ಅವನ ಉದ್ಧರಿಸಿದ.

ಪೂತನಿ ತಾಮಸಿ. ಅವಳೂ ಕೃಷ್ಣನನ್ನು ನಂಬಿದವಳೇ. ಏನೆಂದು? 'ಸಾಮಾನ್ಯ ಶಿಶು ಈತ. ವಿಷ ಉಣಿಸುವೆ. ಕೊಲ್ಲುವೆ.' ಇಲ್ಲದ್ದು ಇದೆ ಎಂದು ನಂಬಿದಳು.
**'ಈತ ಪರಮಾತ್ಮ. ಹುಟ್ಟು ಸಾವು ಇವಗಿಲ್ಲ. ಅಜೇಯ. ಅವಧ್ಯ'**
ಇದ್ದದ್ದು ಇಲ್ಲವೆಂಬ ನಂಬಿಕೆ. ಅಯಥಾರ್ಥ. ತಪ್ಪು ನಂಬಿದಳು. ನಾಶ ಹೊಂದಿದಳು.

ಮಗ ಬಾಲ ಪ್ರಲ್ಹಾದ.  ಹರಿ ಸರ್ವೋತ್ತಮ ನೆಂದ.  ನೆರೆ ನಂಬಿದ.  ಭವ ದಾಟಿದ.
ತಂದೆ ಹಿರಣ್ಯಕಶಿಪು. ಅವನೂ ವಿಷ್ಣುವನ್ನು ನಂಬಿದವನೇ.  ಏನೆಂದು?
ಮೋಸಗಾರ.  ಹೇಡಿ.  ನನ್ನ ಕಂಡರೆ ಓಡಿ ಹೋಗುತ್ತಾನೆ.  ಅಯಥಾರ್ಥ.  ನಂಬಿದ ನಾಶವಾದ.

ಹೀಗೇ ಹಂಗs ನಂಬಿದವರ, ನಾಶ ಹೊಂದಿದವರ ಪಟ್ಟಿಯೂ ಬೆಳೆಯುತ್ತದೆ.

ಅದಕ್ಕಾಗಿ ದಾಸರ ಉದ್ಗಾರ - ಯಾರು ಬದುಕಿದರಯ್ಯಾ ನಿನ್ನ (ಇಂತು) ನಂಬಿ.

ದಾಸರ ಕೊನೆ ಮಾತು -
ಗೋಪಾಲ ಬೇಡುವವರ ಬಳಿ ಕೇಳುವೆ.  ಕಪ್ಪು ಕಾಣಿಕೆ ಕೊಂಬೆ.  ಇದ್ದದ್ದು ಕಸಗೊಂಬೆ.
ವೇಂಕಟೇಶಾ!  ನಿನ್ನ ನಂಬಿದರೆ ತಿರುಪೆಯೂ ಹುಟ್ಟದು.
ಅದು ಹೇಗೆ?  ಏನು ಅರ್ಥ?

ಅವನು ಈಶ.  ಇವನು ದಾಸ.  ಭಕ್ತಿ ವಿರಕ್ತಿ ತುಂಬಿ ದಾಸನೆಂದು ಸಮರ್ಪಿಸಿಕೊಂಡಿದ್ದಾನೆ.  ಇನ್ನೇನು?
ತನ್ನ ಅರಮನೆಯಲ್ಲಿಟ್ಟು ಸುಖಸಾಗರದಿ ಲೋಲಾಡಿಸುವ ಈಶ.
ಮತ್ತೆ ತಿರುಪೆ ಯಾಕೆ? ಹುಟ್ಟುವ ಪ್ರಶ್ನೆಯೇ ಇಲ್ಲ.
ಹೀಗೆ ನಂಬಿ ಕೆಟ್ಟವರಿಲ್ಲ ನಂಬಿ ಉಳಿದವರಿಲ್ಲ ಎಂಬ ದಾಸರಾಯರ ಒಗಟು.

ದಾಸರ ಅಂತರ್ಗತ ಮುಖ್ಯ ಪ್ರಾಣಾಂತರ್ಗತ

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ